ಎಂ ವಿ ಸಿ ನಂ. 80/2020
ಪಿ ಡಬ್ಲ್ಯೂ: 1
ದಿನಾಂಕ 23/12/2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ಎದುರುದಾರರ ಪರ: ಶ್ರೀ ಕೆ ಎನ್ ಎಂ ವಕೀಲರಿಂದ:</u>

ಅಪಘಾತವಾದ ದಿನ ನಾನು ಯಾವ ವಾಹನದಲ್ಲಿ ಹೋಗುತ್ತಿದ್ದೆ ಎಂದರೆ ಸಾಕ್ಷಿ ಸ್ಕೂಟಿಯಲ್ಲಿ ಎಂದು ನುಡಿಯುತ್ತಾರೆ. ಸದರಿ ಸ್ಕೂಟಿ ನನ್ನ ಮಗಳ ಹೆಸರಿನಲ್ಲಿರುತ್ತದೆ. ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ನನಗೆ ಚಾಲನಾ ಪರವಾನಿಗಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತವಾದ ದಿನ ನಾನು ಹೆಲ್ಮೆಟ್ ಧರಿಸಿದ್ದೇನು. ಹೆಲ್ಮೆಟ್ ವಿಚಾರವನ್ನು ಪೋಲೀಸರು ಬರವಣಿಗೆ ಮಾಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಪಘಾತವು ಬೀರೂರಿನ ಪ್ರೀತಿ ಕ್ಯಾಂಟೀನ್ ಸ್ವಲ್ಪ ಮುಂದೆ ಆಗಿರುತ್ತದೆ. ಅಪಘಾತವಾದ ಸ್ಥಳದಲ್ಲಿ ರಸ್ತೆ ತುಂಬಾ ವಿಶಾಲವಾಗಿದ್ದು, ದೊಡ್ಡ ವಾಹನಗಳು ಸರಾಗವಾಗಿ ಚಾಲನೆ ಮಾಡುತ್ತವೆ ಎಂದರೆ ಸರಿ. ನಾನು ಸ್ಕೂಟಿಯಲ್ಲಿ ಯಾವುದೇ ಸಾಮಾನು ಇಟ್ಟುಕೊಂಡಿರಲಿಲ್ಲ. ಗೋವಿಂದರಾಜುರವರ ಅಂಗಡಿ ಬೀರೂರಿನಿಂದ ತರೀಕೆರೆಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಬರುತ್ತದೆ ಎಂದರೆ ಸರಿ. ಅಪಘಾತಕ್ಕೆ ಮುಂಚೆ ಕಾರು ಬಂದಿದ್ದನ್ನು ನಾನು ನೋಡಿರುವುದಿಲ್ಲ. ನಾನು ಸಡನ್ನಾಗಿ ರಸ್ತೆಯ ಬಲಭಾಗಕ್ಕೆ ನನ್ನ ಸ್ಕೂಟಿಯನ್ನು ತಿರುಗಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಇಂಡಿಕೇಟರ್ ಹಾಕಿ ಕೈಯನ್ನು ತೋರಿಸಿ ಬಲಭಾಗಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತವು ತರೀಕೆರೆಯಿಂದ ಬೀರೂರಿನ ಅಭಿಮುಖವಾಗಿ ಬರುವ ರಸ್ತೆಯ ಎಡಭಾಗದಲ್ಲಿ ಆಗಿರುತ್ತದೆ ಎಂದರೆ ಸರಿ. ಅಪಘಾತವು ಟಾರು ರಸ್ತೆ ಬಿಟ್ಟು ಮಣ್ಣು ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಟಾರು ರಸ್ತೆ ಬಿಟ್ಟು ಮಣ್ಣಿನ ರಸ್ತೆಗೆ

ಹೋಗುವಾಗ ಅಪಘಾತವಾಗಿದೆ ಎಂದು ನುಡಿಯುತ್ತಾರೆ. ಟಾರು ರಸ್ತೆಯಿಂದ ಅಪಘಾತವಾದ ಮಣ್ಣಿನ ರಸ್ತೆಯ ಸ್ಥಳಕ್ಕೆ ಸುಮಾರು 2 ಅಡಿ ಅಂತರ ಇತ್ತು ಎಂದರೆ ಸರಿ. ನಾನು ಯಾವುದೇ ಸೂಚನೆ ನೀಡದೆ ಏಕಾಏಕಿ ನನ್ನ ಸ್ಕೂಟಿಯನ್ನು ರಸ್ತೆಯ ಬಲಭಾಗಕ್ಕೆ ತಿರುಗಿಸಿದ್ದರಿಂದ ಸದರಿ ಅಪಘಾತ ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಇಂಡಿಕೇಟರ್ ಹಾಕಿ ಬಲಭಾಗಕ್ಕೆ ಕೈ ತೋರಿಸಿದ್ದರು ಸಹ ಕಾರು ಬಂದು ನನಗೆ ಅಪಘಾತ ಪಡಿಸಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತವು ಬೀರೂರಿನಿಂದ ತರೀಕೆರೆಗೆ ಹೋಗುವ ರಸ್ತೆಯ ಬಲಭಾಗದ ಹಂಚಿನಲ್ಲಿ ಆಗಿರುವುದರಿಂದ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ಪೊಲೀಸರು ಜತೆ ಷರೀಕ್ಕಾಗಿ ಕಾರಿನ ಚಾಲಕ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನಗೆ ಚಾಲನಾ ಪರವಾಗಿನಿ ಇರಲಿಲ್ಲ ಮತ್ತು ನಾನು ಚಾಲನೆ ಮಾಡುತಿತದ್ದ ವಾಹನಕ್ಕೆ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ತಲೆಗೆ ಮತ್ತು ಎಡರಟ್ಟೆಗೆ ಪೆಟ್ಟಾಗಿರುತ್ತದೆ. ವೈದ್ಯರು ಎಡರಟ್ಟೆಗೆ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನನಗೆ ಶಸ್ತ್ರ ಚಿಕಿತ್ಸೆಯ ಅವಶ್ಯಕತೆ ಇದೆ ಎಂದು ವರದಿ ನೀಡಿರುತ್ತಾರಾ ಎಂದರೆ ಸಾಕ್ಷಿ ಹೌದು ಮ್ಯಾಕ್ಸ್ ಆಸ್ಪತ್ರೆಯ ವೈದ್ಯರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ 2019 ರಲ್ಲಿ ವೈದ್ಯರು ವರದಿ ನೀಡಿರುತ್ತಾರೆ. ಪರಿಹಾರ ಕೋರಿ ಅರ್ಜಿ ಸಲ್ಲಿಸಿದ ನಂತರ ಅಥವಾ ನನ್ನ ವಿಚಾರಣೆಯ ಪೂರ್ವದಲ್ಲಿ ವೈದ್ಯರಿಂದ ತಪಾಸಣೆಗೆ ಒಳಪಟ್ಟಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಬೀರೂರು ಸರ್ಕಾರಿ ಆಸ್ಪತ್ರೆಯ ವೈದ್ಯರು

ಅಪಘಾತದಲ್ಲಿ ನನಗೆ ಆದ ಗಾಯಗಳ ಬಗ್ಗೆ ಏನು ವರದಿ ಕೊಟ್ಟಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ-6 ರ ವರದಿಯಂತೆ ಅಪಘಾತದಲ್ಲಿ ನನಗೆ ಸಾಮಾನ್ಯ ಸ್ವರೂಪದ ತರಚಿದ ಗಾಯಗಳು ಮಾತ್ರ ಆಗಿರುತ್ತವೆ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ನನ್ನ ತಲೆಯ ಚರ್ಮ ಸಂಪೂರ್ಣವಾಗಿ ತರಚಿ ಹೊರಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 1 ಲಕ್ಷ ರೂ ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-17 ರ ಪಹಣಿಗಳು ನನ್ನ ತಾಯಿಯ ಹೆಸರಿನಲ್ಲಿರುತ್ತವೆ. ನನಗೆ ಜಮೀನು ಬಿಟ್ಟು ಬೇರೆ ಯಾವುದೇ ರೀತಿಯ ವರಮಾನ ಇರುವುದಿಲ್ಲ ಎಂದರೆ ಸರಿ. ನಿಪಿ-1 ರಿಂದ 17 ರ ದಾಖಲೆಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 27/05/2019 ರಂದು ಅಪಘಾತದ ಬಗ್ಗೆ ದೂರನ್ನು ನೀಡಿಲ್ಲ ಎಂದರೆ ಸಾಕ್ಷಿ ನಾನು ಆಸ್ಪತ್ರೆಯಲ್ಲಿದ್ದೆ ಎಂದು ನುಡಿಯುತ್ತಾರೆ. ಅಪಘಾತದ ಸಂಬಂದ ದೂರನ್ನು ನನ್ನ ಅಣ್ಣನ ಮಗನಾದ ಲೋಹಿತ್ ರವರು ದೂರು ನೀಡಿರುತ್ತಾರೆ. ದೂರಿನಲ್ಲಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಅಪಘಾತವಾದ ದಿನ ಕಾರಿನ ಎಫ್ ಸಿ ಇಲ್ಲದೆ ಇರುವುದರಿಂದ ಪರಿಹಾರ ನೀಡಲು ವಿಮಾ ಕಂಪನಿಯವರು ಬಾದ್ಯರಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಕಾರಿನ ಚಾಲಕ ತಪ್ಪಿನಿಂದ

ಆಗಿಲ್ಲ, ನನ್ನ ತಪ್ಪಿನಿಂದಲೇ ಆಗಿರುವುದರಿಂದ 3 ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸಾಕ್ಷಿ ಕಾರಿನ ಚಾಲಕನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳಿಗೂ ವೈದ್ಯಕೀಯ ಸಲಹಾ ಚೀಟಿಗಳಿಗೂ ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಮ್ಯಾಕ್ಸ ಆಸ್ಪತ್ರೆಯ ವೈದ್ಯರು ನನ್ನ ಎಡರಟ್ಟೆಗೆ ಶಸ್ತ್ರ ಚಿಕಿತ್ಸೆಯಾಗಬೇಕು ಎಂದು ಯಾವುದೇ ವರದಿ ನೀಡದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2019 ರಿಂದ ನಾನು ಈ ದಿನದವರೆಗೆ ಅಪಘಾತದ ಗಾಯಗಳಿಗೆ ಚಿಕಿತ್ಸೆ ಪಡೆದಿಲ್ಲ ಎಂದರೆ ಸಾಕ್ಷಿ ಆಗಾಗ್ಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.